ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 01-03-2004.

# *ಈಗ ತಮ್ಮ ಚಲನೆ ಮತ್ತು ಚಹರೆಯ ಮೂಲಕ ಬ್ರಹ್ಮಾತಂದೆಯ ಸಮಾನ ಅವ್ಯಕ್ತ ರೂಪವನ್ನು ತೋರಿಸಿ, ಸಾಕ್ಷಾತ್ಕಾರ ಮೂರ್ತಿಗಳಾಗಿ*

(अभी अपने चलन और चेहरे द्वारा ब्रह्मा बाप समान अव्यक्त रूप दिखाओ, साक्षात्कार मूर्त बनो)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಭಾಗ್ಯವಿಧಾತ ತಂದೆಯು ತನ್ನ ನಾಲ್ಕೂ ಕಡೆಯ ಶ್ರೇಷ್ಠ ಭಾಗ್ಯವಂತ ಮಕ್ಕಳನ್ನು ನೋಡಿ ಹರ್ಷಿತರಾಗುತ್ತಿದ್ದಾರೆ. ಇಡೀ ಕಲ್ಪದಲ್ಲಿ ಇಂತಹ ಶ್ರೇಷ್ಠಭಾಗ್ಯವು ಮತ್ತ್ಯಾರಿಗೂ ಸಿಗಲು ಸಾಧ್ಯವಿಲ್ಲ. ಕಲ್ಪ-ಕಲ್ಪವು ತಾವು ಮಕ್ಕಳೇ ಈ ಭಾಗ್ಯದ ಅಧಿಕಾರವನ್ನು ಪ್ರಾಪ್ತಿ ಮಾಡಿಕೊಳ್ಳುತ್ತೀರಿ, ತಮ್ಮ ಕಲ್ಪ-ಕಲ್ಪದ ಅಧಿಕಾರದ ಭಾಗ್ಯವು ನೆನಪಿದೆಯೇ? ಈ ಭಾಗ್ಯವು ಸರ್ವಶ್ರೇಷ್ಠ ಭಾಗ್ಯವಾಗಿದೆ ಏಕೆ? ಏಕೆಂದರೆ ಸ್ವಯಂ ಭಾಗ್ಯವಿಧಾತನು ಈ ಶ್ರೇಷ್ಠಭಾಗ್ಯದ ದಿವ್ಯಜನ್ಮವನ್ನು ಮಕ್ಕಳಾದ ತಮಗೆ ನೀಡಿದ್ದಾರೆ, ಯಾರ ಜನ್ಮ ಭಾಗ್ಯವಿಧಾತನ ಮೂಲಕವೇ ಆಗಿದೆಯೋ ಅವರಿಗಿಂತ ಶ್ರೇಷ್ಠಭಾಗ್ಯವು ಮತ್ತ್ಯಾರಿಗೂ ಇರಲು ಸಾಧ್ಯವಿಲ್ಲ. ತಮ್ಮ ಭಾಗ್ಯದ ನಶೆಯ ಸ್ಮೃತಿ ಇರುತ್ತದೆಯೇ? ತಮ್ಮ ಭಾಗ್ಯದ ಪಟ್ಟಿಯನ್ನು ತೆಗೆದರೆ ಎಷ್ಟು ದೊಡ್ಡ ಪಟ್ಟಿ ಇದೆ? ತಾವು ಬ್ರಾಹ್ಮಣರ ಭಾಗ್ಯವಂತ ಜೀವನದಲ್ಲಿ ಯಾವುದೇ ಅಪ್ರಾಪ್ತ ವಸ್ತುವಿಲ್ಲ. ಎಲ್ಲರ ಮನಸ್ಸಿನಲ್ಲಿ ತಮ್ಮ ಭಾಗ್ಯದ ಪಟ್ಟಿಯು ಸ್ಮೃತಿಯಲ್ಲಿ ಬಂದಿದೆಯೇ! ಸ್ಮೃತಿಯಲ್ಲಿ ತಂದುಕೊಳ್ಳಿ, ಈಗ ಸ್ಮೃತಿಯಲ್ಲಿ ಬಂದಿತೇ? ಹೃದಯವು ಯಾವ ಗೀತೆಯನ್ನು ಹಾಡುತ್ತದೆ? ವಾಹ್! ಭಾಗ್ಯವಿಧಾತ ಮತ್ತು ವಾಹ್ ನನ್ನ ಭಾಗ್ಯವೇ! ಈ ಶ್ರೇಷ್ಠಭಾಗ್ಯದ ವಿಶೇಷತೆಯೇನೆಂದರೆ ಒಬ್ಬ ಭಗವಂತನ ಮೂಲಕ ಮೂರು ಸಂಬಂಧಗಳು

ಪ್ರಾಪ್ತಿಯಾಗಿವೆ. ಒಬ್ಬರ ಮೂಲಕ ಒಬ್ಬರಲ್ಲಿ ಮೂರು ಸಂಬಂಧ, ಜೀವನದಲ್ಲಿ ತಂದೆ-ಶಿಕ್ಷಕ-ಸದ್ಗುರು ಈ ವಿಶೇಷ ಸಂಬಂಧಗಳ ಗಾಯನವಿದೆ, ನಿಮಗೆ ಒಬ್ಬರ ಮೂಲಕವೇ ಮೂರು ವಿಶೇಷ ಸಂಬಂಧಗಳು ಮತ್ತು ಪ್ರಾಪ್ತಿಯಿದೆಯೆಂದು ತಾವು ನಶೆಯಿಂದ ಹೇಳುತ್ತೀರಿ - ನಮ್ಮ ತಂದೆ ತಂದೆಯೂ ಆಗಿದ್ದಾರೆ, ಶಿಕ್ಷಕನೂ ಆಗಿದ್ದಾರೆ, ಸದ್ಗುರುವೂ ಆಗಿದ್ದಾರೆ. ತಂದೆಯ ಮೂಲಕ ಸರ್ವ ಖಜಾನೆಗಳ ಗಣಿಯು ಪ್ರಾಪ್ತಿಯಾಗಿದೆ. ಖಜಾನೆಗಳ ಪಟ್ಟಿಯು ಸ್ಮೃತಿಯಲ್ಲಿ ಬಂದಿದೆಯೇ! ಸ್ಮೃತಿಯಲ್ಲಿ ತಂದುಕೊಳ್ಳಿ. ತಂದೆಯ ಮೂಲಕ ಯಾವ-ಯಾವ ಖಜಾನೆಗಳು ಸಿಕ್ಕುಬಿಟ್ಟಿವೆ! ಸಿಕ್ಕಿವೆಯೋ ಅಥವಾ ಸಿಗಬೇಕಾಗಿದೆಯೋ? ಏನು ಹೇಳುವಿರಿ? ಬಾಲಕನಿಂದ ಮಾಲೀಕರಂತೂ ಆಗಿಯೇ ಇದ್ದೀರಿ. **ಶಿಕ್ಷಕನ ಮೂಲಕ ಶಿಕ್ಷಣದಿಂದ ಶ್ರೇಷ್ಠಪದವಿಯು ಪ್ರಾಪ್ತಿಯಾಗಿಬಿಟ್ಟಿದೆ. ಹಾಗೆ ನೋಡಿದರೆ ಪ್ರಪಂಚದಲ್ಲಿಯೂ ಸಹ ಎಲ್ಲದಕ್ಕಿಂತ ಶ್ರೇಷ್ಠಪದವಿಯು ರಾಜ್ಯಪದವಿಯೆಂದು ಹೇಳಲಾಗುತ್ತದೆ ಅಂದಾಗ ತಾವಂತೂ ಡಬಲ್ ರಾಜರಾಗಿಬಿಟ್ಟಿದ್ದೀರಿ. ವರ್ತಮಾನದ ಸ್ವರಾಜ್ಯಾಧಿಕಾರಿಗಳು ಹಾಗೂ ಭವಿಷ್ಯದಲ್ಲಿ ಅನೇಕ ಜನ್ಮಗಳ ರಾಜ್ಯಪದವಿಯ ಅಧಿಕಾರಿಗಳು. ವಿದ್ಯೆಯು ಒಂದೇ ಜನ್ಮದ್ದಾಗಿದೆ, ಅದರಲ್ಲಿಯೂ ಅತೀ ಚಿಕ್ಕದಾದ ಜನ್ಮ ಮತ್ತು ಪದವಿಯ ಪ್ರಾಪ್ತಿಯನ್ನು ನೋಡಿ! ಅನೇಕ ಜನ್ಮಗಳು ಮತ್ತು ರಾಜ್ಯವು ಅಖಂಡ, ಅಚಲ, ನಿರ್ವಿಘ್ನ ರಾಜ್ಯವಾಗಿರುತ್ತದೆ. ಈಗಲೂ ಸಹ ಸ್ವರಾಜ್ಯಾಧಿಕಾರಿ ನಿಶ್ಚಿಂತಚಕ್ರವರ್ತಿಗಳಾಗಿದ್ದೀರಿ, ಆಗಿದ್ದೀರಾ? ನಿಶ್ಚಿಂತಚಕ್ರವರ್ತಿಗಳಾಗಿದ್ದೀರಾ? ಯಾರು ನಿಶ್ಚಿಂತರಾಗಿದ್ದೀರೋ ಅವರು ಕೈಯನ್ನೆತ್ತಿರಿ. ನಿಶ್ಚಿಂತರು, ಸ್ವಲ್ಪವೂ ಚಿಂತೆಯಿಲ್ಲವಲ್ಲವೇ? ನೋಡುತ್ತೇವೆ, ಯಾವಾಗಲಾದರೂ ಯಾವುದೇ ಪಪ್ಪೆಟ್ ಶೋ ಮುಂದೆ ಬಂದಾಗ ಚಿಂತೆ ಬರುತ್ತದೆಯೇ? ಮಾಯೆಯ ಪಪ್ಪೆಟ್ ಶೋ ಮುಂದೆ ಬರುತ್ತದೆಯೇ ಅಥವಾ ಇಲ್ಲವೇ? ಆಗ ಸ್ವಲ್ಪ-ಸ್ವಲ್ಪ ಚಿಂತೆಯಾಗುತ್ತದೆಯೇ? ಆಗುವುದಿಲ್ಲವೇ? ಸ್ವಲ್ಪ ಚಿಂತೆ, ಚಿಂತನೆಯು ನಡೆಯುತ್ತದೆಯೋ ಅಥವಾ ನಡೆಯುವುದಿಲ್ಲವೋ? ಶ್ರೇಷ್ಠಭಾಗ್ಯವು ಈಗಿನಿಂದಲೇ ನಿಶ್ಚಿಂತಚಕ್ರವರ್ತಿಗಳನ್ನಾಗಿ ಮಾಡುತ್ತದೆ. ಈಗ ಯಾವ ಅಲ್ಪ-ಸ್ವಲ್ಪ ಮಾತುಗಳು ಬರುತ್ತವೆಯೋ ಅವು ನಿಮ್ಮನ್ನು ಮುಂದೆಗಾಗಿ ಅನುಭವಿ, ಪರಿಪಕ್ವ ಮಾಡುವಂತಹವುಗಳಾಗಿವೆ. ಈಗಂತೂ ಎಲ್ಲರೂ ಈ ಭಿನ್ನ-ಭಿನ್ನ ಮಾತುಗಳ ಅನುಭವಿಗಳಾಗಿಬಿಟ್ಟಿದ್ದೀರಲ್ಲವೇ! ಗಾಬರಿಯಾಗುವುದಿಲ್ಲವಲ್ಲವೇ? ಆರಾಮವಾಗಿ ಸಾಕ್ಷಿಯ ಆಸನದ ಮೇಲೆ ಕುಳಿತು ಈ ಗೊಂಬೆಯ ಆಟವನ್ನು ನೋಡಿ, ವಾಸ್ತವದಲ್ಲಿ ಇವು ಗೊಂಬೆಗಳಷ್ಟೇ ಮತ್ತೇನೂ ಅಲ್ಲ. ಈಗಂತೂ ಶಕ್ತಿಶಾಲಿಗಳಾಗಿಬಿಟ್ಟಿದ್ದೀರಲ್ಲವೇ? ಅಥವಾ ಕೆಲ-ಕೆಲವೊಮ್ಮೆ ಗಾಬರಿ ಆಗುತ್ತೀರಾ? ಇವು ಕಾಗದದ ಹುಲಿಯಾಗಿ ನಿಮ್ಮ ಮುಂದೆ ಬರುತ್ತವೆ. ವಾಸ್ತವದಲ್ಲಿ ಇದು ಕಾಗದದ ಹುಲಿಯಾಗಿದೆ ಆದರೆ ಹುಲಿಯಾಗಿ ಬರುತ್ತದೆ. ಈಗ ಸಮಯ ಪ್ರಮಾಣ ಅನುಭವಿ ಮೂರ್ತಿಗಳಾಗಿ ಪ್ರಕೃತಿಗೆ, ಸಮಯಕ್ಕೆ, ಮಾಯೆಗೆ ನಾವು ವಿಜಯಿಗಳಾಗಿದ್ದೇವೆ ಭಲೆ ಬನ್ನಿ ಎಂದು ಚಾಲೆಂಜ್ ಮಾಡಿ, ವಿಜಯದ ಚಾಲೆಂಜ್ ಮಾಡಿ.** ಇಂದು ರಥವು ಸ್ವಲ್ಪ ಅನಾರೋಗ್ಯವಾಗಿದೆ ಆದರೂ ಮಿಲನವನ್ನಂತೂ ಮಾಡಬೇಕಲ್ಲವೇ!

**ಬಾಪ್‌ದಾದಾರವರ ಬಳಿ ಎರಡು ಗ್ರೂಪ್ಗಳು ಮತ್ತೆ-ಮತ್ತೆ ಬರುತ್ತವೆ.** ಏತಕ್ಕಾಗಿ ಬರುತ್ತವೆ? ಎರಡು ಗ್ರೂಪ್ನವರು ಬಾಪ್‌ದಾದಾರವರಿಗೆ ಹೇಳುತ್ತಾರೆ - ನಾವು ತಯಾರಾಗಿದ್ದೇವೆ ಎಂದು. ಮೊದಲನೆಯದು ಸಮಯ, ಪ್ರಕೃತಿ ಮತ್ತು ಮಾಯೆ. ಮಾಯೆಗೆ ಈಗ ನನ್ನ ರಾಜ್ಯವು ಹೋಗುವುದಿದೆ ಎಂದು ಅರ್ಥವಾಗಿದೆ ಮತ್ತು ಎರಡನೆಯ ಗ್ರೂಪ್ ಅಡ್ವಾನ್ಸ್ ಪಾರ್ಟಿಯಾಗಿದೆ. ಎರಡು ಗ್ರೂಪ್ಗಳು ದಿನಾಂಕವನ್ನು ಕೇಳುತ್ತಿದ್ದಾರೆ. ವಿದೇಶದಲ್ಲಂತೂ ಒಂದು ವರ್ಷದ ಮೊದಲೇ ನಿಗಧಿಪಡಿಸುತ್ತೀರಲ್ಲವೇ? ಮತ್ತು ಇಲ್ಲಿ (ಭಾರತದಲ್ಲಿ) 6 ತಿಂಗಳ ಮೊದಲು ನಿಗಧಿಪಡಿಸುತ್ತೀರಿ. ಭಾರತದಲ್ಲಿ

**ತೀವ್ರವಾಗಿ ಹೋಗುತ್ತಾರೆ. 15 ದಿನಗಳಲ್ಲಿಯೂ ಯಾವುದೇ ಕಾರ್ಯಕ್ರಮದ ದಿನಾಂಕವು ನಿಗಧಿಯಾಗಿಬಿಡುತ್ತದೆ ಅಂದಮೇಲೆ ಸಮಾಪ್ತಿ, ಸಂಪನ್ನತೆ, ತಂದೆಯ ಸಮಾನರಾಗುವ ದಿನಾಂಕ ಯಾವುದು? ಅದನ್ನು ಬಾಪ್‌ದಾದಾರವರೊಂದಿಗೆ ಎರಡೂ ಗ್ರೂಪ್ನವರು ಕೇಳುತ್ತಾರೆ.** ಆ ದಿನಾಂಕವನ್ನು ಈಗ ತಾವು ಬ್ರಾಹ್ಮಣರು ನಿಗಧಿ ಪಡಿಸಬೇಕಾಗಿದೆ. ಆಗುತ್ತದೆಯೇ? ದಿನಾಂಕವನ್ನು ನಿಗಧಿ ಪಡಿಸಲು ಸಾಧ್ಯವೇ? ಪಾಂಡವರೇ ಹೇಳಿ, ಮೂವರೂ ಹೇಳಿ (ಬಾಪ್‌ದಾದಾ ನಿರ್ವೈರ್‌ಭಾಯಿ, ರಮೇಶ್ಭಾಯಿ, ಬೃಜ್ಮೋಹನ್ ಭಾಯಿಯವರನ್ನು ಕೇಳುತ್ತಿದ್ದಾರೆ) ದಿನಾಂಕವು ನಿಗದಿಪಡಿಸಲು ಆಗುತ್ತದೆಯೇ? ಹೇಳಿ ಸಾಧ್ಯವಿದೆಯೇ? ಅಥವಾ ಆಕಸ್ಮಿಕವಾಗಿ ಆಗಿಬಿಡುವುದೋ, ನಾಟಕದಲ್ಲಿ ನಿಗಧಿಯಾಗಿದೆ ಆದರೆ ಅದನ್ನು ಪ್ರತ್ಯಕ್ಷದಲ್ಲಿ ತರಬೇಕೋ ಅಥವಾ ಬೇಡವೋ? ಅದು ಯಾವ ದಿನಾಂಕವೆಂದು ತಿಳಿಸಿ. ಸಮಯ ಬಂದಾಗ ಆಗಿಬಿಡುತ್ತೀರಾ? ದಿನಾಂಕವನ್ನು ನಿಗಧಿ ಪಡಿಸುವ ಅವಶ್ಯಕತೆಯಿದೆಯೇ? ಮೊದಲಿನ ಸಾಲಿನಲ್ಲಿ ಕುಳಿತಿರುವವರು ತಿಳಿಸಿ, ಆಗುತ್ತದೆಯೇ? ನಾಟಕವನ್ನು ಪ್ರತ್ಯಕ್ಷದಲ್ಲಿ ತರಲು ಮನಸ್ಸಿನಲ್ಲಿ ಮೊದಲು ದಿನಾಂಕದ ಸಂಕಲ್ಪ ಮಾಡಲೇಬೇಕೆಂದು ಯಾರು ಹೇಳುತ್ತೀರೋ ಅವರು ಕೈಯನ್ನು ಎತ್ತಿರಿ. ದಿನಾಂಕವನ್ನು ನಿಗಧಿ ಪಡಿಸಬೇಕಾಗುತ್ತದೆಯೇ? ಇವರು ಕೈಯನ್ನು ಎತ್ತುತ್ತಿಲ್ಲ. ಸಮಯವು ಬಂದಾಗ ತಯಾರಾಗಿಬಿಡುತ್ತೇವೆ ಎಂದು ಹೇಳುತ್ತೀರಾ? ದಿನಾಂಕವನ್ನು ನಿಗಧಿಪಡಿಸಲು ಆಗುತ್ತದೆಯೇ? ಹಿಂದೆ ಇರುವವರಿಗೆ ಅರ್ಥವಾಯಿತೇ? ಸಮಯ ಬಂದಾಗ ತಯಾರಾಗಿಬಿಡುತ್ತೀರಿ ಇದಂತೂ ಸರಿ ಆದರೆ ತಮ್ಮನ್ನು ತಯಾರು ಮಾಡಿಕೊಳ್ಳಲು ಲಕ್ಷ್ಯವಂತೂ ಅವಶ್ಯವಾಗಿ ಇಟ್ಟುಕೊಳ್ಳಬೇಕಾಗುತ್ತದೆ. ಸಂಪನ್ನರಾಗುವುದರಲ್ಲಿ ಲಕ್ಷ್ಯವಿಲ್ಲದೇ ಹೋದರೆ ಹುಡುಗಾಟಿಕೆ(ಸೋಮಾರಿತನ) ಬಂದುಬಿಡುತ್ತದೆ. ನೋಡಿ, ಯಾವಾಗ ದಿನಾಂಕವನ್ನು ನಿಗಧಿಪಡಿಸುತ್ತೀರೋ ಆಗಲೇ ಸಫಲತೆಯು ಸಿಗುತ್ತದೆಯಲ್ಲವೇ. ಯಾವುದೇ ಕಾರ್ಯಕ್ರಮವನ್ನು ಮಾಡಬೇಕಾದರೂ ಅದಕ್ಕೆ ದಿನಾಂಕವನ್ನು ನಿಗಧಿಪಡಿಸುತ್ತೀರಲ್ಲವೇ. ಆಗಲೇಬೇಕು ಎಂಬ ಸಂಕಲ್ಪವನ್ನು ಮಾಡಬೇಕಲ್ಲವೇ ಅಥವಾ ನಾಟಕದಲ್ಲಿ ತಾನಾಗಿಯೇ ಆಗಿಬಿಡುತ್ತದೆಯೋ? ಏನು ತಿಳಿಯುತ್ತೀರಿ? ಮೊದಲ ಸಾಲಿನಲ್ಲಿ ಕುಳಿತಿರುವವರು ಹೇಳಿ ಪ್ರೇಮ್ (ಪ್ರೇಮ್ ಸಹೋದರಿ) ತಿಳಿಸಿ. ಮಾಡಬೇಕಾಗುತ್ತದೆ, ಮಾಡಲೇಬೇಕಾಗುತ್ತದೆ. ಜಯಂತಿ ಹೇಳಿ. ಮಾಡಲೇಬೇಕು ಅದು ಯಾವಾಗ ಆಗುವುದು? ಯಾವಾಗ ಸಮಯವು ಬಂದುಬಿಡುವುದೋ ಆಗ ಅಂತ್ಯದಲ್ಲಿ ಆಗಿಬಿಡುವುದೇ! ಸಮಯವು ನಿಮ್ಮನ್ನು ಸಂಪನ್ನರಾಗಿ ಮಾಡುವುದೋ ಅಥವಾ ತಾವು ಸಮಯವನ್ನು ಸಮೀಪ ತರುತ್ತೀರೋ?

ಬಾಪ್‌ದಾದಾ ನೋಡಿದರು - ಸ್ಮೃತಿಯಲ್ಲಿ ಜ್ಞಾನವೂ ಇರುತ್ತದೆ, ನಶೆಯೂ ಇರುತ್ತದೆ, ನಿಶ್ಚಯವೂ ಇರುತ್ತದೆ ಆದರೆ ಈಗ ಚಲನೆ ಮತ್ತು ಚಹರೆಯಿಂದ ಅದು ಕಂಡುಬರಬೇಕು - ಇದನ್ನು ಪ್ರಯೋಗದಲ್ಲಿ ತನ್ನಿ. ಬುದ್ಧಿಯಲ್ಲಿ ಎಲ್ಲವೂ ನೆನಪಿರುತ್ತದೆ, ಸ್ಮೃತಿಯಲ್ಲೂ ಬರುತ್ತದೆ ಆದರೆ ಈಗ ಅದು ಸ್ವರೂಪದಲ್ಲಿ ಬರಬೇಕಾಗಿದೆ. ಸಾಧಾರಣ ರೂಪದಲ್ಲಿ ಒಂದುವೇಳೆ ಯಾವುದೇ ದೊಡ್ಡ ಸ್ಥಾನ-ಮಾನದ ವ್ಯಕ್ತಿಗಳು ಅಥವಾ ಯಾರಾದರೂ ಸಾಹುಕಾರರ ಮಕ್ಕಳಿದ್ದರೆ ಅವರ ಚಲನೆಯಿಂದಲೇ ಇವರು ಇಂತಹವರೆಂದು ಕಂಡು ಬರುತ್ತದೆ. ಎಲ್ಲರಿಗಿಂತ ಅವರಲ್ಲಿ ಏನಾದರೂ ಒಂದು ಭಿನ್ನತೆ ಕಂಡುಬರುತ್ತದೆ ಅಂದಾಗ ಇಲ್ಲಿ ನಿಮಗೆ ಇಷ್ಟು ದೊಡ್ಡ ಭಾಗ್ಯದ ಆಸ್ತಿಯು ಇದೆ, ವಿದ್ಯೆ ಮತ್ತು ಪದವಿಯೂ ಇದೆ. ಸ್ವರಾಜ್ಯವಂತೂ ಈಗಲೂ ಇದೆ ಅಲ್ಲವೇ! ಎಲ್ಲಾ ಪ್ರಾಪ್ತಿಗಳು ಇವೆ ಆದರೆ ಈಗ ಚಲನೆ ಮತ್ತು ಚಹರೆಯಿಂದ ಭಾಗ್ಯದ ನಕ್ಷತ್ರವು ಮಸ್ತಕದಲ್ಲಿ ಹೊಳೆಯುತ್ತಿರುವುದು ಕಂಡು ಬರಲಿ, ಅದನ್ನು ಈಗ ಸೇರಿಸಿಕೊಳ್ಳಿ. ಈಗ ಮನುಷ್ಯಾತ್ಮರಿಗೆ ಶ್ರೇಷ್ಠ

ಭಾಗ್ಯವಂತ ಆತ್ಮರಾದ ತಮ್ಮ ಮೂಲಕ ಈ ಅನುಭವವಾಗಬೇಕಾಗಿದೆ. ಆಗಬೇಕು ಎಂದಲ್ಲ ಆಗಲೇಬೇಕಾಗಿದೆ. ಇವರು ನಮ್ಮ ಇಷ್ಟದೇವ-ಇಷ್ಟದೇವಿಯರಾಗಿದ್ದಾರೆ, ಇವರು ನಮ್ಮವರು ಆಗಿದ್ದಾರೆ ಎಂದು ಅನುಭವವಾಗಲಿ. ಹೇಗೆ ಬ್ರಹ್ಮಾತಂದೆಯಲ್ಲಿ ನೋಡಿದಿರಿ - ಸಾಧಾರಣ ತನುವಿನಲ್ಲಿದ್ದರೂ ಆದಿಯ ಸಮಯದಲ್ಲಿಯೂ ಬ್ರಹ್ಮಾರವರ ತನುವಿನಲ್ಲಿ ಏನು ಕಂಡುಬರುತ್ತಿತ್ತು? ಕೃಷ್ಣನ ರೂಪವು ಕಾಣಿಸುತ್ತಿತ್ತು ಅಲ್ಲವೇ! ಹೇಗಾದರೆ ಆದಿಯಲ್ಲಿ ಬ್ರಹ್ಮಾತಂದೆಯ ಮೂಲಕ ಆದಿರತ್ನಗಳಿಗೆ ಅನುಭವವಿದೆಯಲ್ಲವೇ! ಅನುಭವವಿದೆ ಮತ್ತು ಅಂತಿಮದಲ್ಲಿಯೂ ತಂದೆಯಿಂದ ಏನು ಕಾಣುತ್ತಿತ್ತು? ಅವ್ಯಕ್ತರೂಪವೇ ಕಾಣಿಸುತ್ತಿತ್ತಲ್ಲವೇ! ಚಲನೆಯಲ್ಲಿ, ಚಹರೆಯಲ್ಲಿ ಕಾಣಿಸುತ್ತಿತ್ತು, ಈಗ ಬಾಪ್‌ದಾದಾರವರು ವಿಶೇಷ ನಿಮಿತ್ತ ಮಕ್ಕಳಿಗೆ ಈ ಹೋಂ ವರ್ಕನ್ನು ಕೊಡುತ್ತಿದ್ದಾರೆ - ಈಗ ಬ್ರಹ್ಮಾತಂದೆಯ ಸಮಾನವಾದ ಅವ್ಯಕ್ತರೂಪ ಕಂಡುಬರಲಿ. ಚಲನೆ ಮತ್ತು ಚಹರೆಯಿಂದ ಕೊನೆಯಪಕ್ಷ 108 ರ ಮಾಲೆಯ ಮಣಿಗಳು ಕಂಡುಬರಲಿ. ಬಾಪ್‌ದಾದಾ ಯಾರು ಎಂಬ ಹೆಸರನ್ನು ಬೇಕೆಂದುಕೊಳ್ಳುತ್ತಿಲ್ಲ, 108ಮಣಿಗಳು ಯಾರು-ಯಾರು? ಎಂದು ಹೆಸರನ್ನು ತಿಳಿಸುವುದಿಲ್ಲ ಆದರೆ ಅವರ ಚಲನೆ ಮತ್ತು ಚಹರೆಯು ಸ್ವತಃವಾಗಿಯೇ ಪ್ರತ್ಯಕ್ಷವಾಗಲಿ. ಈ ಹೋಂವರ್ಕ್‌ಅನ್ನು ಬಾಪ್‌ದಾದಾ ನಿಮಿತ್ತ ಮಕ್ಕಳಿಗೆ ವಿಶೇಷವಾಗಿ ಕೊಡುತ್ತಿದ್ದಾರೆ. ಮೊದಲಿನ ಸಾಲಿನಲ್ಲಿ ಕುಳಿತಿರುವವರೆಲ್ಲರೂ ಕೇಳಿದಿರಾ? ಆಗುತ್ತದೆಯೇ? ಎಷ್ಟು ಸಮಯ ಬೇಕು? ಯಾರು ಕೊನೆಯಲ್ಲಿ ಬಂದಿದ್ದಾರೆಯೋ ಅವರಿಗೆ ಹೆಚ್ಚು ಬೇಕು ಎಂದು ತಿಳಿಯಬಾರದು. ಸಮಯದ ಮಾತಿಲ್ಲ. ನಾವು ಬಂದು ಕೆಲವೇ ವರ್ಷಗಳಾಯಿತು ಎಂದು ತಿಳಿಯಬೇಡಿ. ಯಾರು ಬೇಕಾದರೂ ಲಾಸ್ಟ್ ಸೋ ಫಾಸ್ಟ್ ಮತ್ತು ಫಾಸ್ಟ್ ಸೋ ಫಸ್ಟ್ ಬರಬಹುದಾಗಿದೆ. ಇದೂ ಸಹ ಬಾಪ್‌ದಾದಾರವರ ಚಾಲೆಂಜ್ ಆಗಿದೆ. ಮಾಡಲು ಸಾಧ್ಯವಿದೆ. ಯಾರು ಬೇಕಾದರೂ ಮಾಡಬಲ್ಲಿರಿ. ಕೊನೆಯವರೂ ಸಹ ಮಾಡಬಹುದಾಗಿದೆ. ಕೇವಲ ಮಾಡಲೇಬೇಕು, ಆಗಲೇಬೇಕು ಎಂಬ ಲಕ್ಷ್ಯವನ್ನು ಪಕ್ಕಾ ಇಟ್ಟುಕೊಳ್ಳಿ.

ಡಬಲ್ ವಿದೇಶಿಯರು ಕೈಯನ್ನು ಎತ್ತಿರಿ. ಡಬಲ್ ವಿದೇಶಿಯರು ಏನು ಮಾಡುತ್ತೀರಿ? ಡಬಲ್ ಅವಕಾಶವನ್ನು ತೆಗೆದುಕೊಳ್ಳುತ್ತೀರಲ್ಲವೇ. ಬಾಪ್‌ದಾದಾ ಹೆಸರನ್ನು ಹೇಳುವುದಿಲ್ಲ ಆದರೆ ಇವರು ಆಗಿದ್ದಾರೆ ಎಂಬುದನ್ನು ಅವರ ಚಹರೆಯೇ ತಿಳಿಸುತ್ತದೆ. ಸಾಹಸ(ಧೈರ್ಯ)ವಿದೆಯೇ? ಮೊದಲ ಸಾಲಿನಲ್ಲಿರುವವರನ್ನು ಬಾಪ್‌ದಾದಾ ನೋಡುತ್ತಿದ್ದಾರೆ. ಸಾಹಸವಿದೆಯೇ? ಒಂದುವೇಳೆ ಸಾಹಸವಿದ್ದರೆ ಕೈಯನ್ನು ಎತ್ತಿರಿ. ಸಾಹಸವಿದ್ದರೆ ಮಾತ್ರ ಕೈಯನ್ನು ಎತ್ತಿರಿ. ಹಿಂದೆ ಕುಳಿತಿರುವವರೂ ಕೈಯನ್ನು ಎತ್ತಬಹುದು. ಯಾರು ಮೊದಲು ಮಾಡುವರೋ ಅವರೇ ಅರ್ಜುನರು. ಒಳ್ಳೆಯದು. ಬಾಪ್‌ದಾದಾ ಫಲಿತಾಂಶವನ್ನು ನೋಡುವುದಕ್ಕಾಗಿ, ಯಾವ-ಯಾವ ಪುರುಷಾರ್ಥ ಮಾಡುತ್ತಿದ್ದಾರೆ, ಯಾರು-ಯಾರು ಮಾಡುತ್ತಿದ್ದೀರಿ - ಆ ಫಲಿತಾಂಶವನ್ನು ನೋಡುವುದಕ್ಕಾಗಿ 6 ತಿಂಗಳ ಸಮಯವನ್ನು ಕೊಡುತ್ತಿದ್ದಾರೆ. 6 ತಿಂಗಳ ಫಲಿತಾಂಶವನ್ನು ನೋಡಿ ನಂತರ ತೀರ್ಮಾನ ಮಾಡುತ್ತೇವೆ. ಸರಿಯೇ? ಏಕೆಂದರೆ ಈಗ ನೋಡಿದಾಗ ಸಮಯದ ವೇಗವು ಬಹಳ ತೀವ್ರವಾಗಿ ಹೋಗುತ್ತಿದೆ. ಆದ್ದರಿಂದ ರಚನೆಯು ತೀಕ್ಷ್ಣವಾಗಿ ಹೋಗಬಾರದು, ರಚಯಿತರು ಅದಕ್ಕಿಂತ ಮುಂದೆ ಹೋಗಬೇಕಾಗಿದೆ. ಈಗ ಸ್ವಲ್ಪ ತೀವ್ರ ಮಾಡಿಕೊಳ್ಳಿ. ಮೇಲೆ ಹಾರಿ, ನಡೆಯುತ್ತಿದ್ದೇವೆ ಅಲ್ಲ. ಹಾರುತ್ತಿದ್ದೇವೆ. ಉತ್ತರವನ್ನಂತೂ ಬಹಳ ಚೆನ್ನಾಗಿ ಕೊಡುತ್ತೀರಿ - ನಾವೇ ಆಗುತ್ತೇವಲ್ಲವೇ! ನಾವಲ್ಲದೆ ಮತ್ತ್ಯಾರು ಆಗುವರು! ಎಂದು ಹೇಳುತ್ತೀರಿ ಇದನ್ನು ನೋಡಿ ಬಾಪ್‌ದಾದಾ ಖುಷಿಯಾಗುತ್ತಾರೆ ಆದರೆ ಈಗ ಆತ್ಮರು ತಮ್ಮಿಂದ ವಿಶೇಷವಾಗಿ ಏನನ್ನಾದರೂ ನೋಡಲು ಬಯಸುತ್ತಾರೆ. ಬಾಪ್‌ದಾದಾರವರಿಗೆ ನೆನಪಿದೆ, ಯಾವಾಗ ಆದಿಯಲ್ಲಿ ಮಕ್ಕಳಾದ ತಾವು

ಸೇವೆಗಾಗಿ ಹೊರಟಾಗ ನಿಮ್ಮಿಂದಲೂ ಸಾಕ್ಷಾತ್ಕಾರವಾಗುತ್ತಿತ್ತು. ಈಗ ಸೇವೆ ಮತ್ತು ಸ್ವರೂಪ ಎರಡೂ ಕಡೆ ಗಮನವಿಡಬೇಕು ಹಾಗಾದರೆ ಏನು ಕೇಳಿದಿರಿ! ಈಗ ಸಾಕ್ಷಾತ್ಕಾರಮೂರ್ತಿಗಳಾಗಿ. ಸಾಕ್ಷಾತ್ ಬ್ರಹ್ಮಾ ತಂದೆಯ ಸಮಾನರಾಗಿ. ಒಳ್ಳೆಯದು.

ಇಂದು ಹೊಸ-ಹೊಸ ಮಕ್ಕಳು ಅನೇಕರು ಬಂದಿದ್ದೀರಿ. ತಮ್ಮ ಸ್ನೇಹದ ಶಕ್ತಿಯಿಂದ ಎಲ್ಲರೂ ಬಂದು ತಲುಪಿದ್ದೀರಿ ಆದ್ದರಿಂದ ಬಾಪ್‌ದಾದಾ ವಿಶೇಷವಾಗಿ ಬಂದಿರುವ ಹೊಸ ಮಕ್ಕಳೆಲ್ಲರಿಗೂ ಪ್ರತಿಯೊಬ್ಬರ ಹೆಸರಿನ ಸಹಿತವಾಗಿ ಪದಮದಷ್ಟು ಶುಭಾಷಯಗಳನ್ನು ನೀಡುತ್ತಿದ್ದಾರೆ. ಜೊತೆಗೆ ವರದಾತ ವರದಾನವನ್ನು ನೀಡುತ್ತಿದ್ದಾರೆ - ಸದಾ ಬ್ರಾಹ್ಮಣ ಜೀವನದಲ್ಲಿ ಅಮರರಾಗಿರಿ, ಹಾರುತ್ತಾ ಇರಿ. ಒಳ್ಳೆಯದು.

**ಸೇವೆಯ ಸರದಿ ಪಂಜಾಬನವರದ್ದಾಗಿದೆ:-** ಪಂಜಾಬನವರು ಎದ್ದೇಳಿ. ಬಹಳ ಒಳ್ಳೆಯದು. ಈ ಪದ್ಧತಿ ಚೆನ್ನಾಗಿದೆ, ಪ್ರತಿ ಜೋನ್ನವರಿಗೆ ಅವಕಾಶ ಸಿಗುತ್ತದೆ. ಒಂದಂತು ಯಜ್ಞ ಸೇವೆಯ ಮೂಲಕ ಒಂದೊಂದು ಹೆಜ್ಜೆಯಲ್ಲಿ ಪದಮಗುಣದಷ್ಟು ಸಂಪಾದನೆ ಜಮಾ ಆಗುತ್ತದೆ ಏಕೆಂದರೆ ಮೆಜಾರಿಟಿ ಯಾವುದೋ ಕರ್ಮ ಮಡುತ್ತಾ ಯಜ್ಞ ಸೇವೆ ನೆನಪಿರುತ್ತದೆ ಮತ್ತು ಯಜ್ಞ ಸೇವೆ ನೆನಪು ಬರುವುದರಿಂದ ಯಜ್ಞ ರಚಯಿತ ತಂದೆಯಂತೂ ನೆನಪಿಗೆ ಬರುತ್ತಾರೆ. ಸೇವೆಯಲ್ಲಿಯೂ ಹೆಚ್ಚು ಪುಣ್ಯದ ಖಾತೆ ಜಮಾ ಮಾಡಿಕೊಳ್ಳುತ್ತಾರೆ ಮತ್ತು ಯಾರು ಸತ್ಯ ಪುರುಷಾರ್ಥಿ ಮಕ್ಕಳಿದ್ದಾರೆಯೋ, ಅವರು ತಮ್ಮ ನೆನಪಿನ ಚಾರ್ಟನ್ನು ಸಹಜ ಮತ್ತು ನಿರಂತರವಾಗಿ ಮಾಡಲು ಸಾಧ್ಯ ಏಕೆಂದರೆ ಇದು ಮಹಾರಾಥಿಗಳ ಸಂಗವಾಗಿದೆ, ಸಂಗದ ರಂಗು ಸಹಜವಾಗಿ ಹತ್ತುವುದು. ಗಮನವಿದ್ದರೆ ಈ 8-10 ದಿನಗಳು ಸಿಗುತ್ತವೆ ಇದರಲ್ಲಿ ಬಹಳ ಚೆನ್ನಾಗಿ ಪ್ರಗತಿ ಮಾಡಬಹುದು. ಸಾಧಾರಣ ರೀತಿಯಿಂದ ಸೇವೆಯನ್ನು ಮಾಡಿದರೆ ಇಷ್ಟೊಂದು ಲಾಭವಿಲ್ಲ, ಆದರೆ ಒಬ್ಬ ಸಹಜ ನಿರಂತರ ಯೋಗಿಯಾಗುವ, ಪುಣ್ಯದ ಖಾತೆ ಮಾಡುವ, ಮತ್ತು ದೊಡ್ಡಕ್ಕಿಂತ ದೊಡ್ಡ ಪರಿವಾರದ ನಶೆಯಲ್ಲಿ, ಖುಷಿಯಲ್ಲಿರುವ ಅವಕಾಶವಿದೆ. ಪಂಜಾಬನ್ವರಿಗೆ ಅವಕಾಶವಿದೆ, ಪ್ರತಿಜೋನ್ನವರಿಗೆ ಸಿಗುತ್ತದೆ ಆದರೆ ಲಕ್ಷ್ಯ ಇಟ್ಟುಕೊಳ್ಳಿ ಮೂರು ಲಾಭವಾಗಿವೆ. ಎಷ್ಟು ಪುಣ್ಯದ ಖಾತೆ ಜಮಾ ಆಯಿತು? ಸಹಜ ನೆನಪಿನ ಪ್ರಗತಿಯನ್ನು ಎಷ್ಟು ಮಾಡಿದ್ದೇನೆ? ಮತ್ತು ಸಂಘಟನೆ ಅಥವಾ ಪರಿವಾರದ ಸ್ನೇಹ, ಸಮೀಪತೆಯು ಎಷ್ಟು ಅನುಭವ ಮಾಡಿದಿರಿ? ಈ ಮೂರು ಮಾತಿನ ಫಲಿತಾಂಶವನ್ನು ಪ್ರತಿಯೊಬ್ಬರು ಸ್ವಯಂನ ಬಗ್ಗೆ ನೋಡಿಕೊಳ್ಳಬೇಕು. ಡ್ರಾಮಾದಲ್ಲಿ ಅವಕಾಶವಂತು ಸಿಕ್ಕಿದೆ ಆದರೆ ಅವಕಾಶವನ್ನು (ಚಾಂಸನ್ನು) ತೆಗೆದುಕೊಳ್ಳುವಂತಹ ಕುಲಪತಿ (ಚಾನ್ಸಲರ್) ಆಗಿರಿ. ಪಂಜಾಬಿನವರು ಬುದ್ಧಿವಂತರಾಗಿದ್ದೀರಲ್ಲವೇ. ಒಳ್ಳೆಯದು. ಒಳ್ಳೆಯ ಸಂಖ್ಯೆಯಲ್ಲಿ ಬಂದಿದ್ದೀರಿ, ಮತ್ತು ಸೇವೆಯು ತೆರೆದ ಹೃದಯದಿಂದ ಸಿಗುತ್ತದೆ. ಬರುವಂತಹ ಸಂಖ್ಯೆಯು ಸಹ ಚೆನ್ನಾಗಿ ಬಂದಿದ್ದಾರೆ. ಒಳ್ಳೆಯದು. ಸಂಘಟನೆ ಚೆನ್ನಾಗಿದೆ.

**(ಇಂದು ಎರಡು ವಿಂಗ್- ಗ್ರಾಮ ವಿಕಾಸ ವಿಂಗ್ ಮತ್ತು ಮಹಿಳಾ ವಿಂಗ್ ಮೀಟಿಂಗ್ಗಾಗಿ ಬಂದಿದ್ದಾರೆ)**

ಮಹಿಳಾ ವಿಂಗ್ನವರು ಎದ್ದೇಳಿ- ಇದರಲ್ಲಿ ಟೀಚರ್ಸ್ ಜಾಸ್ತಿ ಇದ್ದಾರೆಯೇ? ಟೀಚರ್ಸ್ ಕೈಯನ್ನು ಎತ್ತಿರಿ. ಸೇವೆ ಮತ್ತು ಸೇವೆಯ ಮೊದಲು ಫಲ. ಸಂಘಟನೆ ಮತ್ತು ತಂದೆಯಿಂದ ಮಿಲನದ ಮೋಜನ್ನು ತೆಗೆದುಕೊಳ್ಳುವುದು. ಸೇವೆ ಮತ್ತು ಫಲ ಎರಡು ಸಿಕ್ಕಿ ಬಿಟ್ಟಿತು. ಒಳ್ಳೆಯದು. ಈಗ ಏನಾದರೂ ಹೊಸ ಪ್ಲಾನ್ ಮಾಡಿದ್ದೀರಾ? ಮಹಿಳಾ

ವರ್ಗದವರದಾಗಿರಬಹುದು ಅಥವಾ ಯಾವುದೇ ವರ್ಗದ್ದಿರಬಹುದು. ಪ್ರತಿಯೊಂದು ಗ್ರೂಪ್ನವರು ವಿಶೇಷ ಪ್ರಾಕ್ಟಿಕಲ್ನಲ್ಲಿ ನಡತೆ ಮತ್ತು ಮುಖದಲ್ಲಿ ಯಾವುದಾದರೂ ಗುಣ ಮತ್ತು ಶಕ್ತಿಯ ಜವಾಬ್ದಾರಿಯನ್ನು ತೆಗೆದುಕೊಂಡರೆ ನಾವು ಈ ಗ್ರೂಪ್, ಮಹಿಳಾ ಗ್ರೂಪ್ ಈ ಗುಣ ಅಥವಾ ಶಕ್ತಿಯ ಪ್ರಾಕ್ಟಿಕಲ್ ಪ್ರತ್ಯಕ್ಷ ರೂಪದಲ್ಲಿ ತರುವೆವು. ಈ ರೀತಿ ಪ್ರತಿಯೊಂದು ವರ್ಗವು ಯಾವುದಾದರೂ ವಿಶೇಷವಾಗಿ ನಿಗಧಿ ಪಡಿಸಿ ಮತ್ತು ಅದರ ಪರಸ್ಪರದಲ್ಲಿ ಹೇಗೆ ಸರ್ವೀಸ್ನ ಫಲಿತಾಂಶವನ್ನು ಗಮನಿಸುತ್ತೀರಿ, ಈ ರೀತಿ ಪರಸ್ಪರದಲ್ಲಿ ಬರೆದಿಟ್ಟುಕೊಳ್ಳಿ, ಅಥವಾ ಸಂಘಟನೆಯಲ್ಲಿ ಇದನ್ನು ಚೆಕ್ ಮಾಡುತ್ತೀರಿ. ಮೊದಲು ನೀವು ಮಾಡಿ ತೋರಿಸಿರಿ. ಮಹಿಳಾ ವಿಂಗ್ನವರು ಮಾಡಿ ತೋರಿಸಿರಿ. ಸರಿಯಲ್ಲವೇ. ಪ್ರತಿಯೊಂದು ವಿಂಗ್ನವರು ಏನಾದರೂ ತಮ್ಮ ಪ್ಲಾನ್ ಮಾಡಿರಿ ಮತ್ತು ಸಮಯವನ್ನು ನಿಗಧಿ ಪಡಿಸಿ ಇಷ್ಟು ಸಮಯದಲ್ಲಿ ಇಷ್ಟು ಪರ್ಸೆಟೇಂಜನ್ನು ಪ್ರಾಕ್ಟಿಕಲ್ನಲ್ಲಿ ತರಬೇಕು ಎಂದಿಟ್ಟುಕೊಳ್ಳಿ. ಬಾಪ್ದಾದಾರವರು ಏನು ಬಯಸುತ್ತಾರೆ, ನಡತೆ ಮತ್ತು ಚಿತ್ರ (ಮುಖದಲ್ಲಿ) ಬರಲಿ ಎಂದು, ಅದು ಬಂದು ಬಿಡುವುದು. ಈ ಪ್ಲಾನ್ ಮಾಡಿ ತಂದೆಗೆ ಕೊಡಬೇಕು. ಪ್ರತಿಯೊಂದು ವಿಂಗ್ ಏನು ಮಾಡುವುದು? ಸೇವೆಯ ಪ್ಲಾನ್ ಹೇಗೆ ಬರೆದಿಟ್ಟುಕೊಳ್ಳುತ್ತೀರಿ, ಹಾಗೆಯೇ ಇದನ್ನು ಮಾಡಿ ಕೊಡಿ. ಸರಿಯಲ್ಲವೇ! ಮಾಡಿ ಕೊಡಿ. ಚಿಕ್ಕ-ಚಿಕ್ಕ ಸಂಘಟನೆಗಳು ಅದ್ಭುತವನ್ನು ಮಾಡಿ ತೋರಿಸಿರಿ. ಸರಿಯಿದೆ. ಟೀಚರ್ಸ್ ಏನು ತಿಳಿದುಕೊಳ್ಳುತ್ತೀರಿ? ಮಾಡಬಹುದೇ? ಮಾಡಬಹುದೇ? ಪ್ಲಾನ್ ಮಾಡಿ. ಒಳ್ಳೆಯದು. ಸೇವೆಯ ಶುಭಾಷಯಗಳು.

**ಗ್ರಾಮ ವಿಕಾಸದ ವರ್ಗದವರು ಎದ್ದೇಳಿ:** ಇಲ್ಲಿಯವರೆಗೆ ಗ್ರಾಮ ವಿಕಾಸದವರು ಎಷ್ಟು ಪರಿವರ್ತನೆ ಮಾಡಿದಿರಿ? ಎಷ್ಟು ಹಳ್ಳಿಗಳಲ್ಲಿ ಮಾಡಿದಿರಿ? (7 ಹಳ್ಳಿಗಳಲ್ಲಿ ಮಾಡಿದ್ದಾರೆ, ಒಂದು ಹಳ್ಳಿಯಲ್ಲಿ 75% ವರೆಗೆ ಕೆಲಸವಾಗಿದೆ. ಈ ಮೀಟಿಂಗ್ನಲ್ಲಿಯೂ ಪ್ರೋಗ್ರಾಮ್ ಮಾಡಿದ್ದೇವೆ- "ಸಮಯದ ಕರೆ- ಸ್ವಚ್ಛ ಸರ್ಣಿಮ ಗ್ರಾಮ ಭಾರತ" (ಈ ಪ್ರೋಜೆಕ್ಟ್ ನ ಒಳಗಡೆ ಹಳ್ಳಿ-ಹಳ್ಳಿಯನ್ನು ವ್ಯಸನ ಮುಕ್ತ ಮತ್ತು ಸ್ವಚ್ಛ ಮಾಡುವ ಸೇವೆ ಮಾಡುತ್ತೇವೆ) ಒಳ್ಳೆಯದು - ಪ್ರಾಕ್ಟಿಕಲ್ನದೆಯಲ್ಲವೇ. ಇದರ ಒಟ್ಟು ಫಲಿತಾಂಶ ಏನೆಲ್ಲಾ ಇದೆಯೋ ಅದು ರಾಷ್ಟ್ರಪತಿ, ಪ್ರಧಾನಮಂತ್ರಿಯ ಹತ್ತಿರ ಹೋಗುತ್ತದೆಯೇ? (ಇನ್ನೂ ಕಳುಹಿಸಿಲ್ಲ) ಕಳುಹಿಸಬೇಕು ಏಕೆಂದರೆ ಹಳ್ಳಿ-ಹಳ್ಳಿಯಲ್ಲಿ ಪ್ರಾಕ್ಟಿಕಲ್ನಲ್ಲಿ ಮಾಡುತ್ತಿದ್ದೀರಿ, ಇದು ಸರ್ಕಾರದ ಕೆಲಸವಾಗಿದೆ ಆದರೆ ನೀವು ಸಹಯೋಗಿಯಾಗುತ್ತೀದ್ದೀರಿ ಅಂದಾಗ ಫಲಿತಾಂಶವನ್ನು ನೋಡಿ ಚೆನ್ನಾಗಿದೆ ಎಂದು ಒಪ್ಪಿಕೊಳ್ಳುವರು. ಒಂದು ಬುಲೆಟಿನ್ (ಚಿಕ್ಕ ದೃಶ್ಯ) ತಯಾರಿ ಮಡಿ ಅದರಿಂದ ಎಲ್ಲಾ ಮುಖ್ಯ ವ್ಯಕ್ತಿಗಳಿಗೆ ಇದು ಹೋಗಲಿ, ಪುಸ್ತಕವಲ್ಲ, ಪತ್ರಿಕೆಯಲ್ಲ, ಚಿಕ್ಕದರಲ್ಲಿ ಪೂರ್ಣ ಫಲಿತಾಂಶ ಎಲ್ಲಾ ಕಡೆಗೂ ಕಳುಹಿಸಬೇಕು. ಒಳ್ಳೆಯದು - ಶುಭಾಷಯಗಳು. ಒಳ್ಳೆಯದು (ಮಧ್ಯ-ಮಧ್ಯದಲ್ಲಿ ಕೆಮ್ಮು ಬರುತ್ತಿದೆ) ಇಂದು ಮಾಧ್ಯಮಕ್ಕೆ ಶಾಂತಿ ಬೇಕಾಗಿದೆ. ಒಳ್ಳೆಯದು.

ಬಾಪ್ದಾದಾರವರ ಬಳಿ ನಾಲ್ಕಾರುಕಡೆಯ ಸೇವೆಯ ಸೇವಾಸಮಾಚಾರಗಳು ಬರುತ್ತಿರುತ್ತವೆ ಮತ್ತು ವಿಶೇಷವಾಗಿ ಈಗ ಯಾವ ಮೂಲೆಯೂ ಸಂದೇಶವಿಲ್ಲದೆ ಉಳಿಯಬಾರದು. ಎಲ್ಲರಿಗೆ ಈ ಸಂದೇಶವು ಸಿಗಬೇಕು ಎಂದು ಯಾವ ಯೋಜನೆಯನ್ನು ಪ್ರತ್ಯಕ್ಷದಲ್ಲಿ ತರುತ್ತಿದ್ದೀರಿ ಅದರ ಫಲಿತಾಂಶವು ಚೆನ್ನಾಗಿದೆ. ಬಾಪ್ದಾದಾರವರ ಬಳಿ ಡಬಲ್ ವಿದೇಶಿ ಮಕ್ಕಳ ಸಮಾಚಾರಗಳು ಬಂದಿವೆ ಮತ್ತು ಯಾರೆಲ್ಲರೂ ಅತಿ ದೊಡ್ಡ ಕಾರ್ಯಕ್ರಮಗಳನ್ನು (ಭಾರತದಲ್ಲಿ) ಮಾಡಿದ್ದೀರೋ ಅವರ ಸಮಾಚಾರವೆಲ್ಲವೂ ಬಂದಿದೆ. ನಾಲ್ಕಾರೂ ಕಡೆಯ ಸೇವೆಯ ಫಲಿತಾಂಶವು

ಸಫಲತಾಪೂರ್ವಕವಾಗಿ ಬಂದಿದೆ ಅಂದಾಗ ಮಕ್ಕಳು ಹೇಗೆ ಸೇವೆಯಲ್ಲಿ ಸಂದೇಶ ಕೊಡುವ ಫಲಿತಾಂಶದಲ್ಲಿ ಸಫಲತೆಯನ್ನು ಪ್ರಾಪ್ತಿಮಾಡಿಕೊಂಡಿದ್ದೀರೋ ಹಾಗೆಯೇ ವಾಣಿಯ ಮೂಲಕ, ಸಂಪರ್ಕದ ಮೂಲಕ ಜೊತೆ-ಜೊತೆಗೆ ತಮ್ಮ ಚಹರೆಯ ಮೂಲಕ ಫರಿಸಶ್ತಾ ರೂಪದ ಸಾಕ್ಷಾತ್ಕಾರವನ್ನು ಮಾಡಿಸುತ್ತಾ ಹೋಗಿ. ಒಳ್ಳೆಯದು.

ಯಾರು ಮೊದಲಬಾರಿ ಬಂದಿದ್ದೀರೋ ಅವರು ಕೈಯನ್ನು ಎತ್ತಿರಿ. ಬಹಳ ಮಂದಿ ಬಂದಿದ್ದೀರಿ. ಹಿಂದೆಯೂ ಇದ್ದಾರೆ. ಒಳ್ಳೆಯದು- ಟೂ ಲೇಟ್ ಬೋರ್ಡ್ ಹಾಕುವುದಕ್ಕೆ ಮುಂಚೆ ಬಂದುಬಿಟ್ಟಿದ್ದೀರಿ, ಒಳ್ಳೆಯದು, ಅವಕಾಶವನ್ನು ತೆಗೆದುಕೊಳ್ಳಿ. ಚಮತ್ಕಾರ ಮಾಡಿ ತೋರಿಸಿ, ಸಾಹಸವನ್ನಿಡಿ, ಬಾಪ್‌ದಾದಾರವರ ಸಹಯೋಗವು ಪ್ರತಿಯೊಬ್ಬ ಮಗುವಿನ ಜೊತೆಯಲ್ಲಿ ಇದ್ದೇ ಇದೆ. ಒಳ್ಳೆಯದು.

**ಬಾಪ್‌ದಾದಾ ನಾಲ್ಕಾರು ಕಡೆಯ ಸಾಕಾರ ಸನ್ಮುಖದಲ್ಲಿ ಕುಳಿತಿರುವ ಮಕ್ಕಳಿಗೆ ಮತ್ತು ತಮ್ಮ-ತಮ್ಮ ಸ್ಥಾನದಲ್ಲಿ, ತಮ್ಮ-ತಮ್ಮ ದೇಶದಲ್ಲಿ ಮಿಲನವನ್ನು ಆಚರಿಸುವಂತಹ ನಾಲ್ಕಾರುಕಡೆಯ ಮಕ್ಕಳಿಗೆ ಬಹಳ-ಬಹಳ ಸೇವೆಯ, ಸ್ನೇಹದ ಮತ್ತು ಪುರುಷಾರ್ಥದ ಶುಭಾಷಯಗಳನ್ನು ನೀಡುತ್ತಿದ್ದಾರೆ ಆದರೆ ಪುರುಷಾರ್ಥದಲ್ಲಿ ತೀವ್ರ ಪುರುಷಾರ್ಥಿಗಳಾಗಿ ಈಗ ಆತ್ಮರನ್ನು ದುಃಖ, ಆಶಾಂತಿಯಿಂದ ಮುಕ್ತರನ್ನಾಗಿ ಮಾಡುವ ಇನ್ನೂ ತೀವ್ರ ಪುರುಷಾರ್ಥ ಮಾಡಿ. ದುಃಖ, ಅಶಾಂತಿ, ಭ್ರಷ್ಟಾಚಾರವು ಅತಿಯಾಗಿ ಹೋಗುತ್ತಿದೆ, ಈಗ ಅತಿಯ ಅಂತ್ಯ ಮಾಡಿ. ಎಲ್ಲರಿಗೆ ಮುಕ್ತಿಧಾಮದ ಆಸ್ತಿಯನ್ನು ತಂದೆಯಿಂದ ಕೊಡಿಸಿ, ಇಂತಹ ಧೃಡಸಂಕಲ್ಪದ ಮಕ್ಕಳಿಗೆ ನೆನಪು, ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 01-03-2004.
***ಈಗ ತಮ್ಮ ಚಲನೆ ಮತ್ತು ಚಹರೆಯ ಮೂಲಕ ಬ್ರಹ್ಮಾ ತಂದೆಯ ಸಮಾನ ಅವ್ಯಕ್ತ ರೂಪವನ್ನು ತೋರಿಸಿ, ಸಾಕ್ಷಾತ್ಕಾರ ಮೂರ್ತಿಗಳಾಗಿ.***

ಜನ್ಮವೇ ಭಾಗ್ಯ ವಿಧಾತನ ಮೂಲಕ ಲಭಿಸಿದೆ ಎಂದರೆ ಅದಕ್ಕಿಂತಲೂ ಶ್ರೇಷ್ಠ ಭಾಗ್ಯ ಇನ್ಯಾವುದೂ ಇರುವುದಿಲ್ಲ. ಶ್ರೇಷ್ಠಭಾಗ್ಯ ಈಗಿನಿಂದಲೇ ನಿಶ್ಚಿಂತ ಚಕ್ರವರ್ತಿಯನ್ನಾಗಿ ತಯಾರು ಮಾಡುತ್ತದೆ. ಈಗ ಬರುವ ಅಲ್ಪಸ್ವಲ್ಪ ಮಾತುಗಳು ನಿಮ್ಮನ್ನು ಮುಂದೆಗಾಗಿ ಅನುಭವಿಯಾಗಿ, ಪರಿಪಕ್ವವಾಗಿ ತಯಾರು ಮಾಡುತ್ತವೆ. ಈಗ ಬ್ರಹ್ಮಾತಂದೆಯ ಸಮಾನವಾಗಿ ನಿಮ್ಮ ಅವ್ಯಕ್ತ ರೂಪವು ಕಾಣಿಸಬೇಕು.  ಕಡಿಮೆಯಲ್ಲಿ ಕಡಿಮೆ 108ರ ಮಾಲೆಯ ಮಣಿಯಂತೆ ಕಾಣಿಸಬೇಕು. ಈಗ ಸೇವೆ ಮತ್ತು ಸ್ವರೂಪ ಎರಡರ ಗಮನವಿರಬೇಕು. ಈಗ ಸಾಕ್ಷಾತ್ಕಾರ ಮೂರ್ತಿಯಾಗಿ ಸಾಕ್ಷಾತ್ ಬ್ರಹ್ಮಾ ತಂದೆಯಂತೆ ಆಗಿರಿ ಎನ್ನುತ್ತಾ ಬಾಪ್‌ದಾದಾ ತನ್ನ ಮಕ್ಕಳೊಂದಿಗೆ ಮಾತನಾಡುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**
ನಾನು ಆತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ಸ್ವಯಂ ಭಾಗ್ಯವಿಧಾತ ಮಕ್ಕಳಾದ ನಮಗೆ ಶ್ರೇಷ್ಠ ಭಾಗ್ಯವಂತವಾದ ದಿವ್ಯಜನ್ಮವನ್ನು ಕೊಟ್ಟಿದ್ದಾರೆ.

2. ನನಗೆ ಒಬ್ಬನ (ಭಗವಂತನ) ಮೂಲಕ ತಂದೆ, ಶಿಕ್ಷಕ, ಸದ್ಗುರುವಿನ ಮೂರು ವಿಶೇಷ ಸಂಬಂಧಗಳು ಮತ್ತು ಪ್ರಾಪ್ತಿ ಲಭಿಸಿದೆ.

3. ನಾನು ತಂದೆಯ ಮೂಲಕ ಸರ್ವಖಜಾನೆಯ ಭಂಡಾರಕ್ಕೆ ಮಾಲಿಕನಾಗಿ, ಶಿಕ್ಷಕನ ಮೂಲಕ ವರ್ತಮಾನದಲ್ಲಿ ಸ್ವರಾಜ್ಯಾಧಿಕಾರಿಯಾಗಿ, ಭವಿಷ್ಯದಲ್ಲಿ ಅನೇಕ ಜನ್ಮಗಳು ಶ್ರೇಷ್ಠ ರಾಜ್ಯ ಪದವಿಯ ಪ್ರಾಪ್ತಿಯನ್ನು ಮತ್ತು ಅಖಂಡವಾಗಿ, ಅಚಲವಾಗಿ ಇರುವ ನಿರ್ವಿಘ್ನ ರಾಜ್ಯವು ಲಭಿಸಿದೆ.

4. ನನಗೆ ಮಾಯೆಯ ವಿಷಯಗಳು ಎದುರಿಗೆ ಬಂದಾಗ ನಾನು ಸಾಕ್ಷಿ ಸ್ಥಿತಿ ಎಂಬ ಸಿಂಹಾಸನದ ಮೇಲೆ ಕುಳಿತು ಪಪೆಟ್ ಶೋ, ಕಾರ್ಟೂನ್ ಶೋನಂತೆ ನೋಡುವ ನಿಶ್ಚಿಂತ ಚಕ್ರವರ್ತಿ.

5. ನಾನು ಅನುಭವೀ ಮೂರ್ತಿಯಾಗಿ ಸಮಯಕ್ಕೆ, ಪ್ರಕೃತಿಗೆ, ಮಾಯೆಗೆ ಪ್ರತಿಜ್ಞೆ ಮಾಡಿದ್ದೇನೆ "ಬನ್ನಿ ನಾನು ವಿಜಯೀ ಆಗಬಲ್ಲೆನು ಎಂಬ ಸ್ವಾಗತವನ್ನು ಹೇಳಿದ್ದೇನೆ.

6. ನನ್ನ ಸ್ಮೃತಿಯಲ್ಲಿ ಜ್ಞಾನದ ನಶೆ, ನಿಶ್ಚಯ ಇದೆ, ನನ್ನ ಚಲನೆ ಮತ್ತು ಚಹರೆಯ ಮೂಲಕ ಭಾಗ್ಯದ ನಕ್ಷತ್ರವು ಮಸ್ತಕದಲ್ಲಿ ಹೊಳೆಯುತ್ತಾ ಕಾಣಿಸುತ್ತಿದೆ, ಪ್ರಜೆಗಳಿಗೆ ನನ್ನ ಇಷ್ಟದೇವಿ, ಇಷ್ಟ ದೇವತೆಯರು ಎಂದು, ಅವರು ನಮ್ಮವರೆಂದು ಅನುಭವವಾಗಿದೆ.

7. ನನ್ನ ಚಹರೆ, ಚಲನೆಯಲ್ಲಿ ನಾನು ಬ್ರಹ್ಮಾ ತಂದೆಯ ಸಮಾನವಾಗಿ ಅವ್ಯಕ್ತ ರೂಪದಲ್ಲಿ, 108ರ ಮಾಲೆಯ ಮಣಿಯಂತೆ ಕಾಣಿಸಿದ್ದೇನೆ.

8. ನಾನು ಕೊನೆಯಲ್ಲಿ ಬಂದರೂ ತೀವ್ರವಾಗಿ ಹೋಗಿ ಮೊದಲ ನಂಬರ್ ನಲ್ಲಿ ಬರುವ ತೀವ್ರಪುರುಷಾರ್ಥಿ.

9. ನನ್ನ ರಚನೆಯಾದ ಸಮಯಕ್ಕಿಂತಲೂ ರಚಯಿತನಾದ ನಾನು ನನ್ನ ವೇಗವನ್ನು ತೀವ್ರ ಮಾಡಿ ಹಾರುತ್ತಿದ್ದೇನೆ.

10. ನಾನು ಸೇವೆ ಮತ್ತು ಸ್ವರೂಪದ ಮೂಲಕ ಸಾಕ್ಷಾತ್ ಬ್ರಹ್ಮಾ ತಂದೆಯಂತೆ ಸಾಕ್ಷಾತ್ಕಾರ ಮೂರ್ತಿಯಾಗಿದ್ದೇನೆ.

11. ನಾನು ಬಾಪ್‌ದಾದಾರವರಿಂದ "ಸದಾ ಬ್ರಾಹ್ಮಣ ಜೀವನದಲ್ಲಿ ಅಮರರಾಗಿರಿ, ಹಾರುತ್ತಾ ಇರಿ" ಎಂಬ ವರದಾನವನ್ನು ಪಡೆದಿದ್ದೇನೆ.